# 9ನೇ ತರಗತಿ ಸಂಕಲನಾತ್ಮಕ ಮೌಲ್ಯಮಾಪನ –1ರ ಮಾದರಿ ನೀಲ ನಕಾಶೆ

## ವಿಷಯ : ವಿಜ್ಞಾನ

| ಅಧ್ಯಾಯ | ಅಧ್ಯಾಯದ ಹೆಸರು | ಜ್ಞಾನ | | | | | ತಿಳುವಳಿಕೆ | | | | | ಅನ್ವಯ | | | | | ಕೌಶಲ | | | | | ಒಟ್ಟು |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | 1 | 2 | 3 | 4 | 5 | 1 | 2 | 3 | 4 | 5 | 1 | 2 | 3 | 4 | 5 | 1 | 2 | 3 | 4 | 5 | |
| | | MCQ | VSA | SA | LA1 | LA2 | MCQ | VSA | SA | LA1 | LA2 | MCQ | VSA | SA | LA1 | LA2 | MCQ | VSA | SA | LA1 | LA2 | |
| | | 1 | 1 | 2 | 3 | 4 | 1 | 1 | 2 | 3 | 4 | 1 | 1 | 2 | 3 | 4 | 1 | 1 | 2 | 3 | 4 | |
| 1 | ನಮ್ಮ ಸುತ್ತಮುತ್ತಲಿನ ದ್ರವ್ಯಗಳು | 1(1) | | | | | | 1(1) | 2(1) | | | | | | | | | | 2(1) | | | 6(4) |
| 2 | ನಮ್ಮ ಸುತ್ತಮುತ್ತಲಿನ ದ್ರವ್ಯವು ಶುದ್ಧವೇ ? | 1(1) | | | | | | 1(1) | | 3(1) | | | | | | | | | | | | 5(3) |
| 5 | ಜೀವದ ಮೂಲ ಘಟಕ | 1(1) | | | | | | | | | | | | | | | | | | | 4(1) | 5(2) |
| 6 | ಅಂಗಾಂಶಗಳು | | | | | | | 4(1)* | | | | | 1(1) | | | | | | | | | 5(2) |
| 8 | ಚಲನೆ | | | 2(1) | | | 1(1) | | | | | | | | | | | | 2(1) | | | 5(3) |
| 9 | ಬಲ ಮತ್ತು ಚಲನೆಯ ನಿಯಮಗಳು | | | | 3(1) | | 1(1) | | | | | | | 2(1) | | | | | | | | 6(3) |
| 10 | ಗುರುತ್ವ (ಭಾಗ–2ರ ಪುಟ 38ರವರೆಗೆ) | | | | | | | 1(1) | | | | | | 2(1) | | | | | | | | 3(2) |
| 15 | ಆಹಾರ ಸಂಪನ್ಮೂಲಗಳಲ್ಲಿ ಸುಧಾರಣೆ | | | | | | | | 2(1) | | | 1(1) | | 2(1) | | | | | | | | 5(3) |
| ಒಟ್ಟು | | 3(3) | | 2(1) | 3(1) | | 2(2) | 7(4) | 4(2) | 3(1) | | 1(1) | 1(1) | 6(3) | | | | | 4(2) | | 4(1) | 40(22) |

**ಹೊಂದಿಸಿ ಬರೆಯಿರಿ**

**ಆವರಣದ ಹೊರಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.ಆವರಣದ ಒಳಗಿರುವ ಸಂಖ್ಯೆಯು ಪ್ರಶ್ನೆಗಳ ಸಂಖ್ಯೆಯನ್ನು ಸೂಚಿಸುತ್ತದೆ.**

# 9ನೇ ತರಗತಿ ಸಂಕಲನಾತ್ಮಕ ಮೌಲ್ಯಮಾಪನ –1 ಮಾದರಿ ನೀಲ ನಕಾಶೆ

## ವಿಷಯ : ವಿಜ್ಞಾನ

**ಆಯಾಮ 1**

**2017–18ನೇ 9ನೇತರಗತಿ ಸಂಕಲನಾತ್ಮಕ ಮೌಲ್ಯಮಾಪನ–1 ರ ಪ್ರಶ್ನೆಪತ್ರಿಕೆ ಮಾದರಿ**

**ವಿಜ್ಞಾನ– ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ**

| ಅಧ್ಯಾಯ | ಘಟಕಗಳು | ಅಂಕಗಳು |
|---|---|---|
| 1 | ನಮ್ಮ ಸುತ್ತಮುತ್ತಲಿನ ದ್ರವ್ಯಗಳು | 6 |
| 2. | ನಮ್ಮ ಸುತ್ತಮುತ್ತಲಿನ ದ್ರವ್ಯವು ಶುದ್ಧವೇ ? | 5 |
| 5. | ಜೀವದ ಮೂಲ ಘಟಕ | 5 |
| 6. | ಅಂಗಾಂಶಗಳು | 5 |
| 8. | ಚಲನೆ | 5 |
| 9. | ಬಲ ಮತ್ತು ಚಲನೆಯ ನಿಯಮಗಳು | 6 |
| 10 | ಗುರುತ್ವ (ಭಾಗ–2ರ ಪುಟ 38ರವರೆಗೆ) | 3 |
| 15. | ಆಹಾರ ಸಂಪನ್ಮೂಲಗಳಲ್ಲಿ ಸುಧಾರಣೆ | 5 |
| ಒಟ್ಟು ಅಂಕಗಳು | | **40** |

**ಆಯಾಮ – 2**

**ಉದ್ದೇಶಗಳಿಗೆ ನೀಡಿರುವ ಪ್ರಾಮುಖ್ಯತೆ**

| ಕ್ರ.ಸಂ. | ಉದ್ದೇಶಗಳು | % | ಅಂಕಗಳು |
|---|---|---|---|
| 01 | ಜ್ಞಾನ | 20 | 08 |
| 02 | ತಿಳುವಳಿಕೆ | 40 | 16 |
| 03 | ಅನ್ವಯ | 20 | 08 |
| 04 | ಕೌಶಲ್ಯ | 20 | 08 |
| ಒಟ್ಟು | | 100 | 40 |

## 9ನೇ ತರಗತಿ ಸಂಕಲನಾತ್ಮಕ ಮೌಲ್ಯಮಾಪನ –1 ರ ಪ್ರಶ್ನೆಪತ್ರಿಕೆ ಮಾದರಿ

### ವಿಷಯ : ವಿಜ್ಞಾನ

### ಪ್ರಶ್ನೆಗಳ ವಿಧಗಳು

| ಕ್ರ.ಸಂ. | ಪ್ರಶ್ನೆಯ ವಿಧ | ಸಂಖ್ಯೆ | ಅಂಕಗಳು | ಒಟ್ಟು |
|---|---|---|---|---|
| 01 | ಬಹುಆಯ್ಕೆ ಪ್ರಶ್ನೆ | 6 | 1 | 6 |
| 2. | ಹೊಂದಿಸಿ ಬರೆಯಿರಿ | 1 | 4 | 4 |
| 3. | ಅತಿ ಕಿರು ಉತ್ತರ | 4 | 1 | 4 |
| 4. | ಕಿರು ಉತ್ತರ | 8 | 2 | 16 |
| 5. | ದೀರ್ಘ ಉತ್ತರ (ವಿಧ 1) | 2 | 3 | 6 |
| 6. | ದೀರ್ಘ ಉತ್ತರ (ವಿಧ 2) | 1 | 4 | 4 |
| | **ಒಟ್ಟು** | **22** | | **40** |

### ಆಯಾಮ – 3

### ಕ್ಲಿಷ್ಟತೆಯ ಮಟ್ಟ

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | % | ಅಂಕಗಳು |
|---|---|---|---|
| 01 | ಸುಲಭ | 30 | 12 |
| 02 | ಸಾಧಾರಣ | 50 | 20 |
| 03 | ಕಠಿಣ | 20 | 8 |
| ಒಟ್ಟು | | 100 | 40 |

# ೯ನೇತರಗತಿ ಸಂಕಲನಾತ್ಮಕ ಮೌಲ್ಯಮಾಪನ -1 ಮಾದರಿ ಪ್ರಶ್ನೆಪತ್ರಿಕೆ

**ಸಮಯ : 1:30ನಿ** **ವಿಷಯ :– ವಿಜ್ಞಾನ** **ಅಂಕಗಳು : 40**

**ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ಕೊಟ್ಟಿದೆ.ಸರಿಯಾದ ಉತ್ತರವನ್ನು ಆರಿಸಿ ಉತ್ತರ ಪತ್ರಿಕೆಯಲ್ಲಿ ಬರೆಯಿರಿ.**

**6x1=6**

1. ಕೆಳಗಿನ ಯಾವ ವಸ್ತುವಿನಲ್ಲಿ ಕಣಗಳ ನಡುವೆ ಹೆಚ್ಚು ಸ್ಥಳಾವಕಾಶಗಳು ಕಂಡು ಬರುತ್ತವೆ .
   ಎ) ಇಟ್ಟಿಗೆ ಬಿ) 1ಲೀ.ಹಾಲು ಸಿ ) ಮೇಜು ಡಿ) 1ಲೀ.ಆಕ್ಸಿಜನ್
2. ಮೊಸರಿನಿಂದ ಬೆಣ್ಣೆಯನ್ನು ಪ್ರತ್ಯೇಕಿಸಲು ಬಳಸುವ ತಂತ್ರ
   ಎ) ಸೆಂಟ್ರಿಫ್ಯೂಜ್ ಬಿ) ಉತ್ಪತನ ಸಿ) ಆವೀಕರಣ ಡಿ) ಸೋಸುವಿಕೆ
3. ಪ್ರಾಣಿ ಜೀವಕೋಶದಲ್ಲಿ ಕಂಡುಬರದ ಕಣದಂಗ
   ಎ) ಕೋಶಪೊರೆ ಬಿ) ಕೋಶಭಿತ್ತಿ ಸಿ) ಕೋಶಕೇಂದ್ರ ಡಿ) ಕೋಶದ್ರವ್ಯ
4. ಸರಾಸರಿ ಜವ ಕಂಡುಹಿಡಿಯುವ ಸೂತ್ರ
   ಎ) **v=t/s** ಬಿ) **v=s/t** ಸಿ) **s=v/t** ಡಿ) **v=sxt**
5. ಇವುಗಳಲ್ಲಿ ಯಾವುದು ಹೆಚ್ಚಿನ ಜಡತ್ವವನ್ನು ಹೊಂದಿದೆ
   ಎ) ಒಂದು ರಬ್ಬರ್ ಚೆಂಡು ಬಿ) ಒಂದು ಬೈಸಿಕಲ್ ಸಿ) ರೈಲು ಡಿ) ಐದು ರೂಪಾಯಿ ನಾಣ್ಯ
6. ದೇಶದ ಆಹಾರ ಸಮಸ್ಯೆಯನ್ನು ನೀಗಿಸಲು ಈ ಕೆಳಗಿನವುಗಳಲ್ಲಿ ಯಾವುದು ಸೂಕ್ತವಾಗಿದೆ.
   ಎ) ಆಹಾರ ಉತ್ಪಾದನೆ ಮತ್ತು ಸಂಗ್ರಹಣೆಯನ್ನು ಹೆಚ್ಚಿಸುವುದು
   ಬಿ) ಜನರಿಗೆ ಆಹಾರವು ಸುಲಭವಾಗಿ ದೊರೆಯುವಂತೆ ಮಾಡುವುದು
   ಸಿ) ಆಹಾರ ಕೊಂಡುಕೊಳ್ಳಲು ಜನರಬಳಿ ಹಣವಿರಬೇಕು
   ಡಿ) ಮೇಲಿನ ಎಲ್ಲವೂ

**7. ಹೊಂದಿಸಿ ಬರೆಯಿರಿ** **1x4=4**

| A | B |
|---|---|
| a) ಪೇರಂಕೈಮ | I) ಒಂದೇ ಪದರದ ಜೀಕೋಶಗಳಿಂದ ಮಾಡಲ್ಪಟ್ಟಿದೆ. |
| b) ಕೋಲಂಕೈಮ | II) ತೆಳುವಾದ ಕೋಶಭಿತ್ತಿ ಇರುವ ಜೀವಕೋಶಗಳನ್ನು ಹೊಂದಿದೆ |
| c) ಸ್ಕ್ಲೀರಂಕೈಮ | III) ಆಹಾರ ವಾಹಕ ಅಂಗಾಂಶ |
| d) ಎಪಿಡರ್ಮಿಸ್ | V) ಜೀವಕೋಶಗಳು ಉದ್ದವಾಗಿರುತ್ತವೆ ಮತ್ತು ಪರಸ್ಪರ ಸೇರುವ ಮೂಳೆಗಳಲ್ಲಿ ಅನಿಯಮಿತವಾಗಿ ದಪ್ಪನಾಗಿರುತ್ತವೆ. |
| | V) ಜರಡಿ ನಳಿಕೆಗಳನ್ನು ಹೊಂದಿದೆ. |
| | VI) ನಿರ್ಜೀವ ಕೋಶಗಳಿಂದಾಗಿದೆ |
| | VII) ಜಲವಾಹಕ ಅಂಗಾಂಶ |

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **4x1=4**

8. ಮೇಜನ್ನು ಘನ ವಸ್ತು ಎಂದು ಕರೆಯುತ್ತಾರೆ. ಏಕೆ ?
9. ವರ್ಣರೇಖನ ಎಂದರೇನು ?
10. ರಾಶಿ ಮತ್ತು ತೂಕಗಳಿಗಿರುವ ಸಂಬಂಧವನ್ನು ಸೂಚಿಸುವ ಸಮೀಕರಣ ಬರೆಯಿರಿ.
11. ಕುಂಡದಲ್ಲಿರುವ ಸಸ್ಯವೊಂದನ್ನು ಗಾಜಿನ ಜಾರ್‌ನಿಂದ ಮುಚ್ಚಿಟ್ಟಾಗ,ಜಾರ್‌ನ ಒಳಭಾಗದ ಗೋಡೆಗಳಲ್ಲಿ ನೀರಾವಿಯು ಕಾಣಿಸಿ ಕೊಳ್ಳುತ್ತದೆ .ಏಕೆ ?

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **8x2=16**

12. ಅಮೋನಿಯಂ ಕ್ಲೋರೈಡ್ ಮತ್ತು ಉಪ್ಪಿನ ಮಿಶ್ರಣವನ್ನು ಬೇರ್ಪಡಿಸುವಿಕೆಯ ವಿಧಾನದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.
13. ಸಂಯುಕ್ತ ಮೀನುಸಾಗಾಣಿಕೆಯ ಅನುಕೂಲಗಳೇನು ?
14. ಕೆಳಗೆ ಕೊಟ್ಟಿರುವ ಕೋಷ್ಟಕದ ಆಧಾರದ ಮೇಲೆ ಮೋಟಾರ್ ವಾಹನವೊಂದು 2 ಸೆಕೆಂಡ್ ಕಾಲಾವಧಿಯಲ್ಲಿ ಕ್ರಮಿಸಿದ ದೂರವನ್ನು ನಕ್ಷೆಯೊಂದಿಗೆ ನಿರೂಪಿಸಿ.
15. ಒಂದು ಕಾಯವು 1) ಏಕರೂಪ ವೇಗೋತ್ಕರ್ಷ 2) ಏಕರೂಪವಲ್ಲದ ವೇಗೋತ್ಕರ್ಷದಲ್ಲಿದೆ ಎಂದು ಯಾವಾಗ ಹೇಳುತ್ತೀರಿ.
16. ನೀರು ಮಂಜುಗಡ್ಡೆಯ ರೂಪದಲ್ಲಿದ್ದಾಗ ತಣ್ಣನೆಯ ಅನುಭವವನ್ನುಂಟು ಮಾಡಿದರೆ,ಅದೇ ನೀರು ಹಬೆಯ ರೂಪದಲ್ಲಿದ್ದಾಗ ತೀವ್ರ ತರದ ಸುಟ್ಟಗಾಯಗಳನ್ನುಂಟು ಮಾಡಬಹುದು.ಇದಕ್ಕೆ ಕಾರಣವೇನು ? ಸೂಕ್ತ ವಿವರಣೆ ನೀಡಿ.
17. **ಇವುಗಳಿಗೆ ವೈಜ್ಞಾನಿಕ ಕಾರಣ ಕೊಡಿ.**
    ಎ)ಚಲಿಸುತ್ತಿರುವ ರೈಲಿನಲ್ಲಿ ಪ್ರಯಾಣಿಕನೊಬ್ಬ ಒಂದು ನಾಣ್ಯವನ್ನು ಮೇಲಕ್ಕೆ ಚಿಮ್ಮುತ್ತಾನೆ.ಅದು ಅವನ ಹಿಂಬದಿಗೆ ಬೀಳುತ್ತದೆ.ಏಕೆ ?
    ಬಿ) ಬಸ್‌ನ ಛಾವಣಿಯ ಮೇಲೆ ಇಡುವ ಲಗೇಜ್‌ಗಳಿಗೆ ದಾರವನ್ನು ಬಿಗಿಯುವುದು ಸೂಕ್ತ ಎಂದು ಏಕೆ ಹೇಳಲಾಗುತ್ತದೆ.
18. ಎ) ಚಂದ್ರನು ಭೂಮಿಯ ಗುರುತ್ವಾಕರ್ಷಣೆಗೆ ಒಳಪಟ್ಟಿದ್ದರೂ ಸಹ ,ಚಂದ್ರ ಭೂಮಿಯ ಮೇಲೆ ಬೀಳುವುದಿಲ್ಲ .ಏಕೆ ?
    ಬಿ) ಒಂದು ವಸ್ತುವನ್ನು ನೀರಿನಲ್ಲಿ ಮುಳುಗಿಸಿದಾಗ ಅದರ ಮೇಲೆ ವರ್ತಿಸುವ ಪ್ಲವನತಾ ಬಲವು ಯಾವ ಧಿಕ್ಕಿನಲ್ಲಿರುತ್ತದೆ.?
19. ವರ್ಷಪೂರ್ತಿ ಕಡಿಮೆ ಮಳೆ ಬೀಳುವ ಹಳ್ಳಿಯಯೊಂದರ ರೈತರಿಗೆ ಅವರು ಉತ್ತಮ ಬೆಳೆ ಬೆಳೆಯಲು ನೀವು ನೀಡುವ ಸಲಹಗಳೇನು ?

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **2x3=6**

20. ಎ)ನಿಮಗೆ ಮರಳು,ಕಬ್ಬಿಣದ ಚೂರುಗಳು,ಅಮೋನಿಯಂ ಕ್ಲೋರೈಡ್ ಮತ್ತು ಸೋಡಿಯಂ ಕ್ಲೋರೈಡ್‌ಗಳ ಮಿಶ್ರಣವನ್ನು ನೀಡಲಾಗಿದೆ.ಈ ಮಿಶ್ರಣದಲ್ಲಿರುವ ಘಟಕಗಳನ್ನು ಪ್ರತ್ಯೇಕಿಸುವ ವಿಧಾನಗಳನ್ನು ವಿವರಿಸಿ.
    ಬಿ) ಟಿಂಡಾಲ್ ಪರಿಣಾಮ ಎಂದರೇನು ?
21. ಎ) ಅಸಂತುಲಿತ ಮತ್ತು ಸಂತುಲಿತ ಬಲಗಳಿರುವ ವ್ಯತ್ಯಾಸಗಳೇನು ?
    ಬಿ) ಬಲದ ಅಂತರಾಷ್ಟ್ರೀಯ ಮೂಲಮಾನ ಯಾವುದು ?

22. **ಸಸ್ಯಜೀವಕೋಶದ ಅಂದವಾದ ಚಿತ್ರ ಬರೆದು ಕೆಳಗಿನ ಭಾಗಗಳನ್ನು ಗುರುತಿಸಿ.** **1x4=4**

    ಎ) ಕೋಶಭಿತ್ತಿ ಬಿ) ಕೋಶಕೇಂದ್ರ ಸಿ) ರಸದಾನಿ ಡಿ) ಪ್ಲಾಸ್ಟಿಡ್